ದಿನಾಂಕಃ **09-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಎನ್.ಬಿ.ಜಿ.ರವರಿಂದ ಃ</u>

**1.** ನಾನು ಹಾಜರುಪಡಿಸಿರುವ ಪಹಣಿಗಳ ಸರ್ವೆ ನಂಬರ್ ನೆನಪಿಲ್ಲ. ಸಾಕ್ಷಿಯು ದಾಖಲೆಗಳನ್ನು ನೋಡಿ ಸರ್ವೆ ನಂ-91/4, ಸರ್ವೆ ನಂ-86/3, ಸರ್ವೆ ನಂ-84/4, ಸರ್ವೆ ನಂ-204/2, ಸರ್ವೆ ನಂ-199/4, ಸರ್ವೆ ನಂ-204/7, ಸರ್ವೆ ನಂ-60/3 ಎಂದು ನುಡಿಯುತ್ತಾರೆ. ವಾದಿಗಳು ಸರ್ವೆ ನಂ-60/3 ಕ್ಕೆ ಮಾತ್ರ ದಾವೆ ಹಾಕಿದ್ದಾರೆ ಎಂದರೆ ಸರಿ. ಸರ್ವೆ ನಂ-91/4 ರ ಜಮೀನು 1979-80 ರಿಂದ 1991-92 ರ ವರೆಗೆ ಬೊಮ್ಮರಸೇಗೌಡರ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಅವರು ನನ್ನ ಚಿಕ್ಕಪ್ಪ ಎಂದು ನುಡಿಯುತ್ತಾರೆ. ಸರ್ವೆ ನಂ-204/2 ನನ್ನ ತಂದೆಯ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿ. ದಾವಾ ಸ್ವತ್ತು ನನ್ನ ತಂದೆಯ ಹೆಸರಿಗೆ ಖಾತೆಯಾಗುವ ಮೊದಲು ನನ್ನ ತಾತ ಗೆಂಡೆಗೌಡರವರ ಹೆಸರಿನಲ್ಲಿ ಇತ್ತು. ನನ್ನ ತಾತ ಗೆಂಡೆಗೌಡರ ಹೆಸರಿನಲ್ಲಿದ್ದ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಾತ ಗೆಂಡೆಗೌಡರವರ ಹೆಸರಿನಲ್ಲಿ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ಪಹಣಿ ನಮೂದಾಗಿರಲಿಲ್ಲ, ಆ ಕಾರಣ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಹ ಲಿಂಗೇಗೌಡ ಬಿನ್ ದೊಡ್ಡಹೈದೇಗೌಡರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿಯು ದೊಳ್ಳೇಗೌಡ ಬಿನ್ ಲಿಂಗೇಗೌಡರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಲಿಂಗೇಗೌಡ ಬಿನ್ ದೊಡ್ಡಹೈದೇಗೌಡರವರು ದಿಃ10.10.1939 ರಂದು ದಾವಾ ಸ್ವತ್ತನ್ನು ಮರಿಚಿನ್ನಮ್ಮ ಉಃ ಚಿಕ್ಕತಾಯಮ್ಮ ಕೋಂ ಕೆಂಪೇಗೌಡರವರಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಲಿಂಗೇಗೌಡ ಬಿನ್ ದೊಡ್ಡಹೈದೇಗೌಡರವರು 2 ನೇ ವಾದಿ ಧರ್ಮಲಿಂಗುರವರ ತಾತ ಎಂದರೆ ನನಗೆ ಗೊತ್ತಿಲ್ಲ. ಮೂಲತಹ ದಾವಾ ಸ್ವತ್ತು ಲಿಂಗೇಗೌಡ ಬಿನ್ ದೊಡ್ಡಹೈದೇಗೌಡರವರ ಹೆಸರಿನಲ್ಲಿ ಇದ್ದರು ಸಹ ನನ್ನ ತಂದೆ ಸುಳ್ಳು ದಾಖಲೆಗಳನ್ನು ಕೊಟ್ಟು ತನ್ನ ಹೆಸರಿಗೆ ಖಾತೆ ಬದಲಾಯಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಗೆ ಸೇರಿದ್ದು ಎಂದು ತೋರಿಸಲು ಕ್ರಯ ಪತ್ರ, ಆರ್. ಆರ್., ಆಕಾರ್ ಬಂದ್, ಪಹಣಿ ಕೊಟ್ಟಿದ್ದೇನೆ.

**2**. ದಿಃ09.10.1984 ರಂದು ಲಿಂಗೇಗೌಡ ಮತ್ತು ಆತನ ಮೂರು ಜನ ಮಕ್ಕಳ ನಡುವೆ ನೊಂದಾಯಿತ ವಿಭಾಗ ಪತ್ರವಾಗಿ ದಾವಾ ಸ್ವತ್ತು 2 ನೇ ವಾದಿಯ ತಂದೆಯ ಹಿಸ್ಸೆಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. 2 ನೇ ವಾದಿಯ ತಂದೆ ದಾವಾ ಸ್ವತ್ತನ್ನು ಆದಾರ ಮಾಡಿ ಪಿ.ಸಿ.ಎ.ಆರ್.ಡಿ. ಬ್ಯಾಂಕ್ ನಲ್ಲಿ ಸಾಲ ಸಹ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ನನ್ನ ತಾತನ ಸ್ವತ್ತುಗಳನ್ನು ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ಸುಳ್ಳು ಮಾಹಿತಿಯನ್ನು ನೀಡಿ ದಾವಾ ಸ್ವತ್ತನ್ನು ಸೇರಿಕೊಂಡು ತನ್ನ ಹೆಸರಿಗೆ ಅಕ್ರಮ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು).

**ಓ. ಹೇ. ಕೇ. ಸ. ಇದೆ.**

**C/C 1 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**